**ಆಲೂರಿನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ.**

ಸಿಸಿ ನಂ. 251/20

| | | |
|---|---|---|
| ಸಾಕ್ಷಿಯ ಹೆಸರು | ರವಿ | ಪಿ.ಡಬ್ಲ್ಯು-1 |
| ತಂದೆಯ ಹೆಸರು | ರಾಜಯ್ಯ | ಸಿ.ಡಬ್ಲ್ಯು-1 |
| ವಯಸ್ಸು | 44 **ವರ್ಷ** | |
| ಉದ್ಯೋಗ | ವ್ಯವಸಾಯ | ದಿನಾಂಕಃ 11-08-2022. |
| ವಾಸ | ಚಾಕನಹಳ್ಳಿ | ಪ್ರಮಾಣ ವಚನ ಬೋಧಿಸಲಾಯಿತು. |

<u>ಮುಖ್ಯ ವಿಚಾರಣೆಃ ಎಪಿಪಿ ರವರಿಂದ</u>

ಚಾಸಾ-2 ರಿಂದ 9 ರವರು ಪರಿಚಿತರು. ದಿಃ12-12-2019 ರಂದು ಬೆಳಿಗ್ಗೆ ಸುಮಾರು 10-30 ರ ಸಮಯದಲ್ಲಿ ನಾನು ಮತ್ತು ಚಾಸಾ-2 ರಿಂದ 4 ರವರು ಆಲೂರಿನ ಚಾಕನಹಳ್ಳಿ ಗ್ರಾಮದಲ್ಲಿರುವ ನಮ್ಮ ಮನೆಯ ಮುಂದಿನ ಜಗಲಿಯ ಮೇಲೆ ಕುಳಿತುಕೊಂಡಿರುತ್ತೇವೆ. ಆ ಸಂದರ್ಭದಲ್ಲಿ ಆರೋಪಿಯು ತನ್ನ ಕೆಎ-46-ಎಂ-3760 ರ ಜೆಸಿಬಿ ವಾಹನವನ್ನು ಹಿಮ್ಮುಖವಾಗಿ ಚಾಲನೆ ಮಾಡಿ ಮಾಡಿಕೊಂಡು ಬಂದು ಮನೆಯ ಬಳಿ ಕುಳಿತಿದ್ದ ಚಾಸಾ-2 ನನ್ನ ನಾದಿನಿಯವರಿಗೆ ಡಿಕ್ಕಿ ಮಾಡಿದ ಪರಿಣಾಮ ಚಾಸಾ-2 ರವರಿಗೆ ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ. ಸದರಿ ಅಪಘಾತವು ಜೆಸಿಬಿ ಚಾಲಕನಾದ ಆರೋಪಿಯ ತಪ್ಪಿನಿಂದಾಗಿರುತ್ತದೆ. ಆರೋಪಿಯು ತನ್ನ ವಾಹನವನ್ನು ಅತಿ ವೇಗವಾಗಿ ಚಾಲನೆ ಮಾಡಿ ಬಂದು ಡಿಕ್ಕಿಪಡಿಸಿರುತ್ತಾರೆ. ಚಾಸಾ-2 ರವರನ್ನು ಹಾಸನದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದು , ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಆಸ್ಪತ್ರೆಗೆ ದಾಖಲಿಸಿರುತ್ತೇವೆ. ನಂತರ ಅಪಘಾತಪಡಿಸಿದ ಆರೋಪಿಯ ಮೇಲೆ ಆಲೂರು ಪೋಲೀಸ್ ಠಾಣೆಗೆ ಕ್ರಮಕೈಗೊಳ್ಳುವಂತೆ ದೂರು ನೀಡಿರುತ್ತೇವೆ. ಸಾಕ್ಷಿಗೆ

ಒಂದು ದಾಖಲೆಯನ್ನು ತೋರಿಸಿದ್ದು , ಸಾಕ್ಷಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆ ದೂರಿನ ಪ್ರತಿಯಾಗಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದಿಃ14-12-2019 ರಂದು ಬೆಳಿಗ್ಗೆ 10 ಗಂಟೆಗೆ ಪೋಲೀಸರು ಘಟನಾ ಸ್ಥಳಕ್ಕೆ ಬಂದಿದ್ದು , ಸ್ಥಳದಲ್ಲಿ ನನ್ನ ಮತ್ತು ಚಾಸಾ-5 ಮತ್ತು 6 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ, ಪೋಟೋ ತೆಗೆದಿರುತ್ತಾರೆ. ಸಾಕ್ಷಿಗೆ ಒಂದು ಒಂದು ದಾಖಲೆಯನ್ನು ತೋರಿಸಿದ್ದು , ಸಾಕ್ಷಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ಕೃತ್ಯಸ್ಥಳ ಮಹಜರ್ ಆಗಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಕೃತ್ಯಸ್ಥಳ ಮಹಜರ್ ಪೋಟೋ ನೋಡಿ ಸಾಕ್ಷಿ ಗುರುತಿಸಿದ್ದು , ಸದರಿ ಪೋಟೋವನ್ನು ನಿಪಿ-3 ಎಂದು , ಸಿ.ಡಿ.ಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪೋಟೋದಲ್ಲಿರುವ ಅಪಘಾತಪಡಿಸಿದ ಜೆಸಿಬಿ ವಾಹನವನ್ನು ನೋಡಿ ಗುರುತಿಸಿದ್ದು , ಸದರಿ ಪೋಟೋವನ್ನು ನಿಪಿ-4 ಎಂದು ಗುರುತಿಸಲಾಯಿತು. ಅಪಘಾತಕ್ಕೆ ಸಂಬಂಧಿಸಿದಂತೆ ಅಪಘಾತದಿಂದ ನಮ್ಮ ಮನೆಯ ಹೆಂಚುಗಳು , ಶೀಟುಗಳು ಮತ್ತು ಮನೆಗೆ ಡ್ಯಾಮೇಜಾಗಿರುತ್ತದೆ ಎಂದು ಮತ್ತು ಇದರಿಂದ ನಮಗೆ 25 ಸಾವಿರದಿಂದ 35 ಸಾವಿರ ರೂ .ಗಳವರೆಗೆ ನಷ್ಟವಾಗಿರುತ್ತದೆಂದು ತನಿಖಾಧಿಕಾರಿಗಳ ಮುಂದೆ ಮರುಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃಶ್ರೀ. ಬಿ.ಎಂ.ಜಿ. ಆರೋಪಿ ಪರ ವಕೀಲರಿಂದಃ-

ನಾನು 5 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಚಾಸಾ-4 ರವರು ನನ್ನ ತಾಯಿ. ಚಾಸಾ-3 ರವರು ನನ್ನ ತಮ್ಮ . ಚಾಸಾ-2 ನನ್ನ ನಾದಿನಿ. ನಾನು ನಮ್ಮ ಮನೆಯ ಮುಂಭಾಗ ನಿಂತಿದ್ದೆನು. ನಮ್ಮ ಮನೆಯ ಮುಂಭಾಗ 10 ರಿಂದ 15 ಅಡಿ ದೂರದಲ್ಲಿ ನಿಂತಿದ್ದೆನು. ನಮ್ಮ ಮನೆಯು ದಕ್ಷಿಣಾಭಿಮುಖವಾಗಿದೆ. ಮನೆಯ ಮುಂಭಾಗದಲ್ಲಿ ಜಗುಲಿ ಇದ್ದು , ಮನೆಯ ಎಡಭಾಗದ ಜಗಲಿ ಮೇಲೆ

ಚಾಸಾ-2 ರವರು ಕುಳಿತಿದ್ದರು. ಬಲಭಾಗದ ಜಗಲಿ ಮೇಲೆ ನನ್ನ ತಮ್ಮ ಮತ್ತು ತಾಯಿ ಕುಳಿತಿದ್ದರು. ಜೆಸಿಬಿ ಪಶ್ಚಿಮ ದಿಕ್ಕಿನಿಂದ ಬಂದಿರುತ್ತದೆ. ನಮ್ಮ ಮನೆ ಮುಂಭಾಗದ ರಸ್ತೆ ಸುಮಾರು 15 ಅಡಿ ಅಗಲವಿರುತ್ತದೆ. ರಸ್ತೆ ಎರಡೂ ಬದಿಗಳಲ್ಲಿ ಚರಂಡಿ ವ್ಯವಸ್ಥೆ ಇದೆ ಎಂದರೆ ಸರಿ . ನಮ್ಮ ಮನೆಯಿಂದ 2 ರಿಂದ 3 ಅಡಿ ಅಂತರದಲ್ಲಿ ಚರಂಡಿ ಇದೆ. ಅಪಘಾತವಾದಾಗ ಸ್ಥಳದಲ್ಲಿ ನಾನು , ಚಾಸಾ-1 ರಿಂದ 3 ರವರು ಇದ್ದೆವು, ಬೇರೆ ಯಾರೂ ಇರಲಿಲ್ಲ. ಚಾಸಾ-5 ಮತ್ತು 6 ರವರು ಘಟನೆಯಾದ 15 ನಿಮಿಷಗಳಲ್ಲಿ ಸ್ಥಳಕ್ಕೆ ಬಂದಿರುತ್ತಾರೆ. ನಮ್ಮ ಮನೆಯ ಮುಂಭಾಗದ ಕಾಂಕ್ರೀಟ್ ರಸ್ತೆ ಮೇಲೆ ಬಟ್ಟೆ ಮತ್ತು ಪಾತ್ರೆ ತೊಳೆಯುತ್ತೇವೆಂದರೆ ಸರಿಯಲ್ಲ. ಅಪಘಾತವಾದ ದಿನ ಆರೋಪಿ ಯಾವ ಬಣ್ಣದ ಬಟ್ಟೆ ಧರಿಸಿದ್ದನೆಂದು ನನಗೆ ಈಗ ಹೇಳಲಾಗುವುದಿಲ್ಲ. ರಸ್ತೆಯ ಎರಡೂ ಬದಿಗಳಲ್ಲಿ ಮನೆಗಳಿವೆ ಎಂದರೆ ಸರಿ . ನಮ್ಮ ಮನೆಯಿಂದ 25 ರಿಂದ 30 ಅಡಿ ದೂರದಲ್ಲಿ ರಸ್ತೆ ತಿರುವಿನಿಂದ ಕೂಡಿದೆ ಎಂದರೆ ಸರಿ . ನಿಪಿ-3 ರಲ್ಲಿ ಮನೆ ಮುಂಭಾಗದ ಜಗಲಿಯ ಕಲ್ಲುಗಳಿಗೆ ಜಖಂ ಉಂಟಾಗಿರುವುದು ಕಂಡುಬಂದಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಮನೆಯ ಮೇಲ್ಭಾಗದ ಶೀಟ್ ಹಾಳಾಗಿರುತ್ತದೆಂದು ನುಡಿಯುತ್ತಾರೆ. ನಾನು ಮತ್ತು ಚಾಸಾ-2 ರವರು ಗಾರೆ ಕೆಲಸಕ್ಕೆ ಹೋಗುತ್ತಿದ್ದೆವು ಎಂದರೆ ಸರಿಯಲ್ಲ. ರಸ್ತೆ ಕಾಮಗಾರಿ ಕೆಲಸಕ್ಕೆ ಹೋದಾಗ ಚಾಸಾ-2 ರವರು ಟ್ರ್ಯಾಕ್ಟರ್ ಮೇಲಿಂದ ಬಿದ್ದು ಗಾಯಗೊಂಡಿರುತ್ತಾರೆಂದರೆ ಸರಿಯಲ್ಲ. ಅಪಘಾತಪಡಿಸಿದ ವಾಹನಕ್ಕೆ ಯಾವುದೇ ವಿಮಾ ಸೌಲಭ್ಯ ಇರಲಿಲ್ಲವಾದ ಕಾರಣ ರಸ್ತೆಯಲ್ಲಿ ನಿಂತಿದ್ದ ಜೆಸಿಬಿ ವಾಹನದ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಮನೆ ಮುಂಭಾಗದ ಜಗಲಿ ಅಥವಾ ಮೇಲ್ಛಾವಣಿ ಯಾವುದೇ ನಷ್ಟಕ್ಕೊಳಗಾಗದಿದ್ದರೂ ಸಹ ಆರೋಪಿ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಜೆಸಿಬಿ ವಾಹನದ ಮಾಲೀಕರು ನಮ್ಮನ್ನು ಬಂದು ಪ್ರಶ್ನಿಸಿದಾಗ ಪ್ರಕರಣವನ್ನು ಹಿಂಪಡೆಯುತ್ತೇವೆಂದು ತಿಳಿಸಿದೆವು ಎಂದರೆ ಸರಿಯಲ್ಲ. ತದನಂತರದಲ್ಲಿ ಆರ್ ಸಿ ಮಾಲೀಕರಿಂದ 50 ಸಾವಿರ ರೂ ಗಳನ್ನು ಪರಿಹಾರವಾಗಿ ಕೇಳಿದ್ದೆವು ಎಂದರೆ ಸರಿಯಲ್ಲ. ನಮ್ಮ ಊರಿನ ಎಲ್ಲಾ ಗ್ರಾಮಸ್ಥರಿಗೆ ಈ ವಿಷಯ ತಿಳಿದಿತ್ತು ಎಂದರೆ ಸರಿಯಲ್ಲ. ಚಾಸಾ-2 ರವರು ಅಪಘಾತ ಪರಿಹಾರ ಕೋರಿ ದಾವೆ ಹೂಡಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಆ ಪ್ರಕರಣದಲ್ಲಿ ಊರಿನ ಗ್ರಾಮಸ್ಥರು ವಾಹನದ ಮಾಲೀಕರ ಪರ ಸಾಕ್ಷ್ಯ ನುಡಿದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಿಪಿ-1 ಅನ್ನು ಪೋಲೀಸರು ಬರೆದಿರುತ್ತಾರೆ.

ನಿಪಿ-1 ಕ್ಕೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಆರೋಪಿಗೂ , ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರ್ ಕಾಲದಲ್ಲಿ ನಾನು ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.,
ಆಲೂರು.